ಆರಂಭದಲ್ಲಿ, ಈ ವಿಭಕ್ತ ಕೌಟುಂಬಿಕ ವ್ಯವಸ್ಥೆಯಲ್ಲಿ, ಗಂಡ ಹೊರಗೆ ದುಡಿದರೆ ಹೆಂಡತಿ ಮನೆ-ಮಕ್ಕಳ ಸುರಕ್ಷತೆಯ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದಳು. ಹೀಗಾಗಿ ಮಾತೆಯೇ ಮೊದಲ ಗುರುವೆಂದು ಗುರುತಿಸಲಾಗಿತ್ತು. ಮಕ್ಕಳು ತಂದೆಯ ಸಂಪಾದನೆಯ ಮುಖಾಂತರ ತಮ್ಮ ಅಗತ್ಯಗಳನ್ನು ಪೂರೈಸಿಕೊಂಡಿದ್ದು, ಸದಾ ತಾಯಿಯ ಮಡಿಲಲ್ಲಿ ಆಶ್ರಯ-ರಕ್ಷಣೆ, ಪ್ರೀತಿ-ವಾತ್ಸಲ್ಯಗಳನ್ನು ಅನುಭವಿಸುತ್ತಿದ್ದುವು. ಈ ಮೂಲಕ ಉತ್ತಮ ಸಂಸ್ಕಾರ ಹೊಂದಿ, ಉತ್ತಮ ನಾಗರಿಕರಾಗಿ ತಮ್ಮ ತಂದೆ-ತಾಯಿ, ಸಮಾಜ ಇವುಗಳಿಗೆ ಸ್ಪಂದಿಸುತ್ತಿದ್ದರಷ್ಟೇ ಅಲ್ಲದೆ, ಮುಪ್ಪಿನಲ್ಲಿ ತಂದೆ-ತಾಯಿಗಳನ್ನು ಒಂಟಿಯಾಗಿ ಬಿಡದೆ, ವೃದ್ಧಾಶ್ರಮಕ್ಕೆ ತಳ್ಳದೆ, ಪೂಜ್ಯ ಭಾವನೆಯಿಂದ ನೋಡಿಕೊಳ್ಳುತ್ತಿದ್ದರು. ಆದರೆ, ಸ್ತ್ರೀಸ್ವಾತಂತ್ರ್ಯ-ಸಮಾನತೆಯ ಭಾವನೆ (ಅವಳು ಅನಾದಿಕಾಲದಿಂದ ಸ್ವತಂತ್ರಳೂ ಸಮಾನಳೂ ಆಗಿದ್ದು, ಗಂಡಿಗೆ ಸಂಸ್ಕಾರ ಕೊಡುತ್ತಾ ಅವನ ಮೇಲೆ ಪ್ರಭುತ್ವವನ್ನು ಪಡೆದಿದ್ದಳು. ಆ ಮಾತು ಬೇರೆ) ಮತ್ತು ಆರ್ಥಿಕ ಸ್ವಾವಲಂಬನೆಯ ಗೀಳುಗಳಿಂದ, ಅವಳೂ ಹೊರಹೋಗಿ ದುಡಿಯುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ಕುಟುಂಬದ ವರಮಾನವು ಕುಟುಂಬನಿರ್ವಹಣೆಗೆ ಸಾಕಾಗದಾಗ. ಗಂಡಿನೊಟ್ಟಿಗೆ ಹೆಣ್ಣೂ ಹೊರಗೆ ಹೋಗಿ ದುಡಿಯುವುದು ಅನಿವಾರ್ಯವಾಯಿತು. ಗ್ರಾಮದ ಬಡಕುಟುಂಬಗಳಲ್ಲಿ, ಕಡಿಮೆ ಸಂಬಳದ ಕೆಲಸ ಮಾಡುವ ಒಬ್ಬ ವ್ಯಕ್ತಿಯಿದ್ದರೆ, ಹೆಚ್ಚು. ಆದರೆ, ಸಾಕಷ್ಟು ಹಣ ಸಂಪಾದನೆಯ ವೃತ್ತಿ ಹೊಂದಿದ ಗಂಡನಿದ್ದಾಗ್ಯೂ, (ಉದಾ: ಐ.ಎ.ಎಸ್ ಮುಂತಾದ ಉನ್ನತ ಹುದ್ದೆಯ ಅಧಿಕಾರಿಗಳು, ಪ್ರಾಧ್ಯಾಪಕರು ಇತ್ಯಾದಿ...) ಹೆಂಡತಿಯು ಹೊರದುಡಿದು ಹೆಚ್ಚು ಸಂಪಾದನೆ ಮಾಡುವುದು ಅನಿವಾರ್ಯವೇನಲ್ಲ. ಬದಲಾಗಿ ಅನಾಹುತವೇ ಹೆಚ್ಚು! ಇದರಿಂದ ನಿರುದ್ಯೋಗಿ ಕುಟುಂಬಗಳ ಸಂಖ್ಯೆ ವೃದ್ಧಿಸುತ್ತದೆ. ಅಲ್ಲದೆ, ಗಂಡ-ಹೆಂಡಿರು ಇಬ್ಬರೂ ಅನಿವಾರ್ಯವಲ್ಲದ ಪ್ರಸಂಗಗಳಲ್ಲಿ ಹೊರಹೋಗಿ ದುಡಿದರೆ, ಅವರಿಗೆ ಹುಟ್ಟಿದ ಮಕ್ಕಳ ಲಾಲನೆ-ಪಾಲನೆ ಸುಸಂಸ್ಕೃತರಲ್ಲದ ಆಯಾ/ದಾದಿಗಳ ಪಾಲಾಗುತ್ತದೆ. ಇದರ ಪರಿಣಾಮ, ಅಂತಹ ಮಕ್ಕಳು ಭಾವನಾತ್ಮಕವಾಗಿ ಅನಾಥವಾಗುತ್ತವೆ ಮತ್ತು ವಿವಿಧ ರೀತಿಯ ಲೋಪ-ದೋಷಗಳಿಗೆ ಬಲಿಯಾಗುತ್ತವೆ. ಹೀಗಾಗಿ ತಂದೆ-ತಾಯಿಗಳು ಮಕ್ಕಳ ಒಲವನ್ನೂ ಮತ್ತು ಮಕ್ಕಳು ತಂದೆ-ತಾಯಿಗಳ ಪ್ರೀತಿಯನ್ನೂ ಕಳೆದುಕೊಂಡಂತಾಗುತ್ತದೆ. ಇದರಿಂದಾಗಿ ಮಕ್ಕಳು ಸ್ವೇಚ್ಛೆಯಾಗಿ ಬೆಳೆದು ಅನಾಗರಿಕರೂ ಅಸಭ್ಯರೂ ಆಗಿ ಸಮಾಜಘಾತುಕರಾಗಬಹುದು (ವಾಸ್ತವವಾಗಿ, ಇಂತಹ ಉನ್ನತಾಧಿಕಾರಿಗಳ-ಶ್ರೀಮಂತರ ಮಕ್ಕಳೇ ಸಮಾಜಘಾತುಕರಾದ ಉದಾಹರಣೆಗಳೇ ಜಾಸ್ತಿ). ಅಲ್ಲದೆ ಅಂತಹ ಮಕ್ಕಳು ಅನಾಥಪ್ರಜ್ಞೆಯಿಂದ ಮನೋ-ದೈಹಿಕ ರೋಗಿಗಳಾಗಿ, ಆತ್ಮಹತ್ಯೆಯ ಪ್ರಕರಣಗಳಲ್ಲಿ ಕೊನೆಗೊಳ್ಳಬಹುದು. ತಂದೆ-ತಾಯಿಗಳ ಮುಪ್ಪಿನಲ್ಲಿ ಅಂತಹ ಮಕ್ಕಳೆಂದೂ ಅವರನ್ನು ನೋಡಿಕೊಳ್ಳುವುದಿಲ್ಲ; ಅವರಿಗೆ ವೃದ್ಧಾಶ್ರಮಗಳೇ ಗತಿ.

ಇಂತಹ ಸಮಸ್ಯೆಗಳಿಗೆ ಯುಕ್ತಾಯುಕ್ತವಾಗಿ ವಿವೇಚಿಸಿ ಪರಿಹಾರವನ್ನು ಕಂಡುಕೊಳ್ಳಬೇಕು. ಕುಟುಂಬ ಸಾಗಿಸಲು ಸಾಕಾಗುವಷ್ಟು ಆರ್ಥಿಕ ಸಂಪನ್ಮೂಲವಿದ್ದರೆ, ಅತಿಯಾಸೆಗೆ ಆಸ್ಪದಗೊಡದೆ ಕುಟುಂಬದ ಒಬ್ಬ ಸದಸ್ಯ (ಗಂಡ ಅಥವಾ ಹೆಂಡತಿ) ಕೆಲಸಕ್ಕೆ ಹೋಗಿ, ಇನ್ನೊಬ್ಬರು ಮನೆ-ಮಕ್ಕಳ, ಸತಿ/ಪತಿಯ ಸ್ವಾಸ್ಥ್ಯಕ್ಕಾಗಿ ಮನೆಯೊಳಗೆ ದುಡಿಯುವುದೇ ಲೇಸು.

ಗಂಡು ಮತ್ತು ಹೆಣ್ಣು, ಈ ಇಬ್ಬರೂ ಸಂಸಾರವೆಂಬ ಬಂಡಿಯ ಎರಡು ಚಕ್ರಗಳು; ಇಬ್ಬರೂ ಅರ್ಧನಾರೀಶ್ವರರಿದ್ದಂತೆ ಮುಖ್ಯರು ಮತ್ತು ಇಬ್ಬರೂ ಸಮಾನರು. ಇಬ್ಬರೂ ಸಂಸಾರದ ಎರಡು ಕಣ್ಣುಗಳೇ. ಇದನ್ನರಿತು ಬಾಳಿದರೆ, ಯಾವ ಸಮಸ್ಯೆಯೂ ಬಾರದು. ಅಲ್ಲದೆ, ಗಂಡು ಹೆಣ್ಣು – ಇಬ್ಬರೂ ಭಗವಂತನ ಸೃಷ್ಟಿಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ಭಗವಂತನ ದೂತರು-ಕಾರ್ಯನಿರ್ವಾಹಕರು-ದೈವಸ್ವರೂಪರು. ಹೀಗೆ ಪರಿಭಾವಿಸುವುದನ್ನೇ ಸ್ವಾಮಿ ವಿವೇಕಾನಂದರು ಸೃಷ್ಟಿಯ (ಜಗತ್ತಿನ) ದೈವೀಕರಣವೆಂದು (Deification of World) ಕರೆದದ್ದು. ಗಂಡ ಹೆಂಡತಿಯಲ್ಲಿ ದೈವವನ್ನು ಕಾಣಬೇಕು; ಹೆಂಡತಿ ಗಂಡನಲ್ಲಿ ದೈವವನ್ನು ಕಾಣಬೇಕು. ಶ್ರೀರಾಮಕೃಷ್ಣ ಪರಮಹಂಸರು ಶ್ರೀಶಾರದಾದೇವಿಯವರಲ್ಲಿ ಜಗನ್ಮಾತೆಯನ್ನೇ ಕಾಣಲಿಲ್ಲವೇ. ದಂಪತಿಗಳು ಮಕ್ಕಳನ್ನು ದೇವರ ಅವತಾರವೆಂದೇ ಭಾವಿಸಬೇಕು. ಇದುವೇ ಸ್ವಾಮಿ ವಿವೇಕಾನಂದರ ಮಾತಿನ ಒಳಗುಟ್ಟು ಇಲ್ಲಿ, ಕೇವಲ ಸಮಾನತೆ, ಸಹನೆ ಮುಖ್ಯವಲ್ಲ; ಸ್ವೀಕಾರ, ಸಮರ್ಪಣೆ, ಸೇವೆ ಮುಖ್ಯ. ಈ ಭಾವ ಬೆಳೆದರೆ ಮಾತ್ರ ನೈಜ ಸಮಾನತೆ ಹಾಗೂ ಸಮತ್ವ ಸಾಧ್ಯ. ಯಾವಾಗ ಗಂಡ-ಹೆಂಡತಿಯರು ಪರಸ್ಪರ ದೈವವನ್ನು ಕಾಣುತ್ತಾರೊ, ಆಗ ಕುಟುಂಬದ ಎಲ್ಲ ಸಮಸ್ಯೆಗಳೂ ಕರಗಿ ಹೋಗುತ್ತವೆ. ನಮ್ಮ ಸುಖಕ್ಕೆ ಕೇವಲ ಹಣ ಮುಖ್ಯವಲ್ಲ, ಇಂದ್ರಿಯ ಲೋಲುಪತೆ ಮುಖ್ಯವಲ್ಲ.

ಇದ್ದುದರಲ್ಲಿ ತೃಪ್ತಿಪಟ್ಟುಕೊಂಡು, ಭಗವಂತನಲ್ಲಿ ನಮ್ಮದೆಲ್ಲವನ್ನೂ ಸಮರ್ಪಿಸಿಕೊಂಡು, ದೊರೆತುದೆಲ್ಲವೂ ಭಗವಂತನ ಪ್ರಸಾದವೆಂದು ತಿಳಿದು, ಸದಾ ಸಮಾಧಾನಿಯಾಗಿರುವುದೇ ಮುಖ್ಯ. ಭಗವದ್ಗೀತೆಯು ಬೋಧಿಸುವ 'ಸರ್ವತ್ರ ಸಮದರ್ಶಿತ್ವ' ವು ಸಮಾಧಾನ, ಸುಖ ಮತ್ತು ಶಾಂತಿಗಳ ನಿಜವಾದ ಸೂತ್ರವಾಗಿದೆ. ಇದುವೇ ಕೌಟುಂಬಿಕ, ಅಲ್ಲದೇ ಅಂತಹ ಅನೇಕ ಕುಟುಂಬಗಳನ್ನು ಹೊಂದಿದ ಸಮಾಜದ ಅಡಿಗಲ್ಲೂ ಆಗಿದೆ.

ನಾವೆಲ್ಲರೂ, ನಿರವಯವಿಯೂ, ನಿರಾಕಾರಿಯೂ, ಅನಾದಿಯೂ, ಅನಂತವೂ ಆದ ಬಯಲಿನ (ಭಗವತ್ತತ್ವದ) ಬುಗ್ಗೆಗಳು. ನಮ್ಮ ಒಳ–ಹೊರಗೆಲ್ಲ ಇರುವುದು ಸರ್ವವ್ಯಾಪಿಯಾದ ಈ ಭಗವತ್ತತ್ವವೇ. ಎಲ್ಲರೂ, ಎಲ್ಲವೂ (ವಿಶ್ವವೆಲ್ಲವೂ) ಇದರಲ್ಲಿಯೇ ತೇಲುತ್ತಿದೆ, ಸುತ್ತುತ್ತಿದೆ, ಪ್ರತಿಷ್ಠಾಪಿತವಾಗಿದೆ. ಈ ತತ್ತ್ವ ನಮ್ಮ ಒಳ–ಹೊರಗೆಲ್ಲ ತುಂಬಿ ತುಳುಕುತ್ತಿದೆ. ಇದೊಂದೇ ಸತ್ಯ. ಹಾಗಿದ್ದಾಗ ನಮಗೂ ಅನ್ಯರಿಗೂ ಭೇದವೆಲ್ಲಿ? ಈ ಭೇದ ಕೇವಲ ತೋರಿಕೆ. ವಿವೇಕಿಯಾದವನು ನಿಜವನ್ನು ಬದಿಗೊತ್ತಿ ತೋರಿಕೆಗೆ ಹೊಡೆದಾಡುತ್ತಾನೆಯೆ? ಎಂದೂ ಇಲ್ಲ. ಕಾರಣ, ಅರಿವಿನ ಜನ್ಮ ಹೊಂದಿರುವ ನಾವು (ಮನುಷ್ಯರು), ಈ ಚಿತ್ ಸಾಗರದಲ್ಲಿನ ನಾಮರೂಪಾತ್ಮಕವಾದ ನೊರೆ–ತೊರೆಗಳನ್ನು ದಾಟಿ, ಕೇವಲ ಅರೂಪವೂ ಪರಬ್ರಹ್ಮಸ್ವರೂಪವೂ ಆದ ಬರಿಬಯಲಿನಲ್ಲಿ ಲಯ ಸಾಧಿಸಿ ಸಮಾಧಾನಿಯಾಗಿರಬೇಕು. ಈ ಆಧ್ಯಾತ್ಮಿಕ ಭಾವನೆಯೇ ಸಕಲ ಕೌಟುಂಬಿಕ ಸಮಸ್ಯೆಗಳಿಗೆ ಪರಿಹಾರ.

ಕೌಟುಂಬಿಕ ಸಮಸ್ಯೆಗಳಲ್ಲಿ ಮಕ್ಕಳ ವಿದ್ಯಾಭ್ಯಾಸ ಮತ್ತು ಅವರ ಮದುವೆ–ಮುಂಜಿಗಳು ಸೇರಿಕೊಂಡಿವೆ. ಮಕ್ಕಳನ್ನು, ಅವರಲ್ಲಿ ಅಡಗಿರುವ ಜ್ಞಾನಭಂಡಾರದ ಆವಿಷ್ಕಾರಕ್ಕಾಗಿ ಸದಾ ಪ್ರಯತ್ನಿಸುವಂತೆಯೂ, ಅವರ ಸಂಪೂರ್ಣ ವ್ಯಕ್ತಿತ್ವ ವಿಕಸಿತವಾಗುವಂತೆಯೂ ನೋಡಿಕೊಳ್ಳುವುದು ಅತ್ಯಗತ್ಯ. ಮಕ್ಕಳ ಸುಂದರ ಜೀವನವೇ ಶಿಕ್ಷಣದ ಗುರಿಯಾಗಬೇಕು. ಅವರನ್ನು ಹೆಚ್ಚು ಡಿಗ್ರಿಗಳನ್ನು ಸಂಪಾದಿಸಲು ಪ್ರೋತ್ಸಾಹಿಸುವುದಕ್ಕಿಂತ, ಸ್ವಾವಲಂಬಿಗಳೂ ಸ್ವಾಭಿಮಾನಿಗಳೂ ಆಗಿ ಸಮಾಜದ ಏಳ್ಗೆಗೆ ದುಡಿಯಲು ಪ್ರಚೋದಿಸಬೇಕು. ಮಕ್ಕಳ ಮದುವೆ ಮಾಡಲು ತಂದೆ–ತಾಯಿಗಳು ಇಂದಿನ ಕಾಲದಲ್ಲಿ ಬಹು ಪ್ರಯಾಸಪಡುವುದು ಸರ್ವೇಸಾಮಾನ್ಯವಾಗಿದೆ. ಋಣಾನುಬಂಧವಿಲ್ಲದೆ ಯಾವುದೂ ನಡೆಯುವುದಿಲ್ಲವೆಂಬುದನ್ನು ಗಮನದಲ್ಲಿಟ್ಟುಕೊಂಡು, ಭಗವಂತನ ಮೇಲೆ ಭರವಸೆಯನ್ನಿಟ್ಟುಕೊಂಡರೆ ಎಲ್ಲವೂ ಸಹಜವಾಗಿ, ಸಕಾಲದಲ್ಲಿ, ನಿರಾಯಾಸವಾಗಿ ಜರುಗಿಹೋಗುತ್ತದೆ.

ನಮ್ಮ ಜೀವನದ ಎಲ್ಲ ಘಟನೆಗಳೂ, ಆಗು–ಹೋಗುಗಳೂ ಭಗವಂತನ ಗರ್ಭದಲ್ಲಿ ಜರುಗುವುದರಿಂದ, ಅವನ ಇಚ್ಛೆಯಂತೆಯೇ ಜರುಗುತ್ತವೆಂಬುದು ಸತ್ಯಸ್ಯ ಸತ್ಯ. **'ತೇನ ವಿನಾ ತೃಣಮಪಿ ನ ಚಲತಿ'** – ಅವನ ಇಚ್ಛೆಯಿಲ್ಲದೆ ಒಂದು ಹುಲ್ಲುಕಡ್ಡಿಯೂ ಅಲುಗಾಡುವುದಿಲ್ಲ ಎಂಬ ದಿವ್ಯವಾಣಿಯನ್ನು ಕೇಳಿಲ್ಲವೆ? ಆದ್ದರಿಂದ, ದುಃಖ ಬಂದಾಗ ಕುಗ್ಗದೆ, ಸುಖ ಬಂದಾಗ ಹಿಗ್ಗದೆ, ಎಲ್ಲವೂ ಭಗವತ್ ಪ್ರಸಾದವೆಂದು ಸ್ವೀಕರಿಸಬೇಕು. ಇದುವೇ ಕುಟುಂಬದ ಸಮಸ್ಯೆಗಳೂ ಸೇರಿದಂತೆ ಎಲ್ಲ ರೀತಿಯ ಜೀವನದ ಸಮಸ್ಯೆಗಳ ಪರಿಹಾರ ಮಾರ್ಗ! •

## ಸಂಸಾರದಲ್ಲಿ ತ್ಯಾಗ!

**ತಮ್ಮ ಯೌವನದ ಕಾಲದಲ್ಲಿ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಕಾಂಗ್ರೆಸ್ ಕಚೇರಿಯಲ್ಲಿ ಗುಮಾಸ್ತರಾಗಿ ಕೆಲಸ ನಿರ್ವಹಿಸುತ್ತಿದ್ದರು. ತಮಗೆ ಸಂಬಳವಾಗಿ ಬರುತ್ತಿದ್ದ ₹ ೫೦ಗಳಲ್ಲೇ ಸಂಸಾರವನ್ನು ಸಾಗಿಸುತ್ತಿದ್ದರು. ಒಂದು ದಿನ ಶಾಸ್ತ್ರಿಯವರ ಪರಿಚಿತರೊಬ್ಬರು ಶಾಸ್ತ್ರಿಗಳ ಮನೆಗೆ ಬಂದು, ತಮಗೆ ₹ ೫೦ ಸಾಲ ಜರೂರಾಗಿ ಬೇಕಾಗಿದೆಯೆಂದು ಕೇಳಿದರು. ಶಾಸ್ತ್ರಿಯವರಲ್ಲಿ ಹಣವಿರಲಿಲ್ಲವಾದ್ದರಿಂದ, ತಮ್ಮ ಅಸಹಾಯಕ ಸ್ಥಿತಿಯನ್ನು ವಿವರಿಸಿ, ತುಂಬಾ ನೊಂದುಕೊಂಡರು. ಶಾಸ್ತ್ರಿಗಳ ಮಾತನ್ನು ಗಮನಿಸಿದ ಶಾಸ್ತ್ರಿಗಳ ಹೆಂಡತಿ, ತಮ್ಮಲ್ಲಿದ್ದ ₹ ೫೦ಗಳನ್ನು ಬಂದಿದ್ದಾತನಿಗೆ ಕೊಟ್ಟು ಸಹಾನುಭೂತಿ ಹೇಳಿ ಕಳಿಸಿದರು. ತಮ್ಮ ಹೆಂಡತಿಯ ಹತ್ತಿರ ಇಷ್ಟೊಂದು ಹಣ ಹೇಗೆ ಬಂತೆಂದು ಆಶ್ಚರ್ಯಗೊಂಡ ಶಾಸ್ತ್ರಿಯವರು ತಮ್ಮ ಹೆಂಡತಿಯನ್ನು ಕುರಿತು "ನಿನ್ನಲ್ಲಿ ಇಷ್ಟೊಂದು ಹಣ ಹೇಗೆ ಬಂತು?" ಎಂದು ಕೇಳಿದರು. ಆಕೆ, "ಮನೆ ಖರ್ಚಿಗೆಂದು ಕೊಡುತ್ತಿದ್ದ ಹಣದಲ್ಲಿ ಪ್ರತಿ ತಿಂಗಳು ಸ್ವಲ್ಪ ಉಳಿಸುತ್ತಿದ್ದೆ" ಎಂದು ತಿಳಿಸಿದರು. ಮಾರನೆ ದಿನ ಕಚೇರಿಗೆ ಬಂದು, ಶಾಸ್ತ್ರಿಗಳು ತಮಗೆ ಕೊಡುತ್ತಿರುವ ಸಂಬಳ ₹ ೫೦ ಜಾಸ್ತಿಯೆಂದೂ, ತಿಂಗಳಿಗೆ ₹ ೪೫ ಸಾಕೆಂದು ತಮ್ಮ ಮೇಲಿನವರಿಗೆ ತಿಳಿಸಿ, ಮನೆ ಖರ್ಚಿಗಾಗಿ ಕೊಡುತ್ತಿದ್ದ ಹಣದಲ್ಲಿ ₹ ೫ ಕಡಿಮೆ ಮಾಡಿದರು. ಎಂತಹ ತ್ಯಾಗಬುದ್ಧಿ! (ಆಧಾರ: *ದೊಡ್ಡವರ ದಾರಿ*, ಸಂಪಾದಕ : ಟಿ.ವಿ. ವೆಂಕಟರಾಮಯ್ಯ)**

# ರಾಮಾಯಣದಲ್ಲಿ ಕೌಟುಂಬಿಕ ಮೌಲ್ಯಗಳು

ಡಾ. ಕೆ.ಎಲ್. ಪ್ರಸನ್ನಾಕ್ಷಿ



ಸಮಾಜವು ಸುವ್ಯವಸ್ಥಿತವಾಗಿ, ಸುಖ ನೆಮ್ಮದಿಗಳಿಂದ ಇರಲು ಇರುವ ಏಕೈಕ ವ್ಯವಸ್ಥೆ 'ಕುಟುಂಬ'. ಪಾಲಿಸುವವನು, ಪಾಲಿಸಲು ಅರ್ಹರಾದ ಎಲ್ಲರೂ 'ಕುಟುಂಬ'ದಲ್ಲಿ ಸೇರುತ್ತಾರೆ. ಮನುಸ್ಮೃತಿ ಕುಟುಂಬಸ್ಥನನ್ನು ಮರಕ್ಕೆ ಹೋಲಿಸುತ್ತದೆ. ಮರವು ಸ್ವತಃ ತಾನು ಬಿಸಿಲು, ಮಳೆ ಮೊದಲಾದ ಕಷ್ಟಗಳನ್ನು ಅನುಭವಿಸುತ್ತದೆ. ದಿಕ್ಕು ದಿಕ್ಕುಗಳಿಂದ ಬರುವ ಎಲ್ಲಾ ಹಕ್ಕಿಗಳಿಗೂ, ಕೀಟಗಳಿಗೂ ಆಶ್ರಯ ನೀಡುತ್ತದೆ. ಹಣ್ಣುಹಂಪಲು, ನೆರಳನ್ನು ನೀಡಿ ಆದರಿಸುತ್ತದೆ. ಹಾಗೆಯೇ ಕುಟುಂಬಸ್ಥನು, ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸ – ಹೀಗೆ ಎಲ್ಲಾ ಆಶ್ರಮದವರಿಗೂ ಆಶ್ರಯನಾಗಿದ್ದಾನೆ. ನೊಂದು, ಬೆಂದು, ಬಸವಳಿದವರಿಗೆ ತಂಪಿನ ನೆಲೆಯಾಗಿದ್ದಾನೆ. ವ್ಯಕ್ತಿ–ಪರಿಸರ, ವ್ಯಕ್ತಿ–ವ್ಯಕ್ತಿಗಳ ನಡುವಿನ ಆತ್ಮೀಯ ಸಂಬಂಧದ ಬೆಸುಗೆಯೇ ಸಂಸಾರದ ಸಾರ. ಈ ಬೆಸುಗೆ ಬಲಗೊಳ್ಳಲು ಕಷ್ಟಸಹಿಷ್ಣುತೆ, ತ್ಯಾಗ, ಮರುಗುವ ಹೃದಯ, ಪ್ರೀತಿ ವಾತ್ಸಲ್ಯಗಳು ಕುಟುಂಬದ ಸದಸ್ಯರಲ್ಲಿ ಅಗತ್ಯ ವಾಗಿ ಇರಬೇಕು. ಈ ರೀತಿ ಮೌಲ್ಯಗಳನ್ನು ಅಳವಡಿಸಿಕೊಂಡಿರುವ ಕುಟುಂಬವು ಸುಖ, ಶಾಂತಿ, ನೆಮ್ಮದಿಗಳ ನೆಲೆಬೀಡಾಗಿರುತ್ತದೆ. ಇಂತಹ ಒಂದು ಕುಟುಂಬ ಮಾತ್ರವೇ ಇಡೀ ಸಮಾಜಕ್ಕೆ ಆಸರೆಯಾಗಿ ನಿಲ್ಲಬಲ್ಲದು.

ಈ ರೀತಿಯ ಕುಟುಂಬವ್ಯವಸ್ಥೆ ವೇದಕಾಲ ದಿಂದಲೂ ನಿರಂತರವಾಗಿ ನಡೆದುಬಂದಿದೆ. ಈ ಮೌಲ್ಯಗಳು ರಾಮಾಯಣದಲ್ಲಿ ಹೇಗೆ ಬಿಂಬಿತವಾಗಿವೆ ಎಂದು ತಿಳಿಯುವುದೇ ಈ ಲೇಖನದ ಉದ್ದೇಶ. ರಾಮಾಯಣದ ಅಯೋಧ್ಯೆ, ಕಿಷ್ಕಿಂಧೆ ಮತ್ತು ಲಂಕಾ ನಗರಗಳ ಜನರ ಜೀವನದಲ್ಲಿ ಕೌಟುಂಬಿಕ ಮೌಲ್ಯಗಳು ಹಾಸುಹೊಕ್ಕಾಗಿ ಬೆಸೆದುಕೊಂಡಿವೆ. ಕುಟುಂಬದ ಯಜಮಾನ ಅನುಸರಿಸಬೇಕಾದ ಕರ್ತವ್ಯ, ಧರ್ಮಗಳ ಉಪದೇಶವನ್ನು ರಾಮಾಯಣದ ಅನೇಕ ಸಂದರ್ಭಗಳಲ್ಲಿ ಕಾಣಬಹುದು. ಅವುಗಳಲ್ಲಿ ಕೆಲವು ನಿದರ್ಶನಗಳನ್ನು ಇಲ್ಲಿ ಗಮನಿಸಬಹುದು.

**ಅನುವ್ರತಃ ಪಿತುಃ ಪುತ್ರಃ...** ಎಂಬ ಅಥರ್ವವೇದದ (೩:೩೦:೨) ಮಾತಿನಂತೆ, ಮಗನಾದವನು ತಂದೆಯ ಸತ್ಯಧರ್ಮಗಳ ಆಚರಣೆಯಲ್ಲಿ ಸಹಾಯಕನಾಗಿರಬೇಕು. ಅವುಗಳನ್ನು ನೆರವೇರಿಸಬೇಕಾದ ಸಂದರ್ಭಗಳಲ್ಲಿ ತಂದೆಗೆ ವಿಧೇಯನಾಗಿರಬೇಕು. ಅದರಂತೆಯೇ ತಂದೆಯ ಮಾತನ್ನು ಪಾಲಿಸುವುದೇ ಬಹು ದೊಡ್ಡ ಧರ್ಮ ಎಂದು ರಾಮನು ಭಾವಿಸಿದ್ದನು. ಕೌಸಲ್ಯೆ, ಲಕ್ಷ್ಮಣ ಮುಂತಾದ ಕುಟುಂಬದ ಯಾವುದೇ ಸದಸ್ಯರಾಗಲಿ, ಅದರ ಪ್ರಕಾರ ನಡೆದುಕೊಳ್ಳಲೇ

ರಾಮಾಯಣವು ಕೌಟುಂಬಿಕ ಸಾಮರಸ್ಯವನ್ನು ಅತ್ಯಂತ ಉದಾತ್ತ ನೆಲೆಯಲ್ಲಿ ಬಿಂಬಿಸುವ ಮೇರುಕೃತಿಯಾಗಿದೆ. ಇಲ್ಲಿನ ಆದರ್ಶ ಪಾತ್ರಗಳ ಭವ್ಯ ಚಿತ್ರಣದ ಮೂಲಕ, ಆದಿಕವಿ ವಾಲ್ಮೀಕಿಯು ಕುಟುಂಬಸೌಹಾರ್ದದ ಆವಶ್ಯಕತೆಯನ್ನು ಪರಿಣಾಮಕಾರಿಯಾಗಿ ಬಿಂಬಿಸಿದ್ದಾನೆ. ಅದನ್ನು ಈ ಲೇಖನದಲ್ಲಿ ಸೋದಾಹರಣವಾಗಿ ಹಾಗೂ ಪ್ರಭಾವಶಾಲಿಯಾಗಿ ಪ್ರತಿಬಿಂಬಿಸಿರುವ ಲೇಖಕಿ ನಿವೃತ್ತ ಕಾಲೇಜು ಪ್ರಾಂಶುಪಾಲರು. ಸಂಸ್ಕೃತ ವಿದ್ವಾಂಸರಾದ ಇವರು ವಿವೇಕಪ್ರಭದ ಸ್ವಯಂಸೇವಕರು; ಇವರ ಹಲವಾರು ಲೇಖನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.

ಬೇಕು ಎಂಬ ಅಭಿಪ್ರಾಯವನ್ನು ತಳೆದಿದ್ದನು. ಆದುದರಿಂದಲೇ, ಅವನು ಕಾಡಿಗೆ ಹೋಗುವುದು ಬೇಡವೆಂದು ಕೌಸಲ್ಯೆ ಪರಿಪರಿಯಾಗಿ ಬೇಡಿಕೊಂಡರೂ ಅವನು ಒಪ್ಪುವುದಿಲ್ಲ. ಆಶೀರ್ವಾದ ಮಾಡಿ, ಕಳುಹಿಸಿಕೊಡಬೇಕೆಂದು ಬೇಡುತ್ತಾನೆ. ಕಡೆಗೆ ಕೌಸಲ್ಯೆಯೇ ಪ್ರಯಾಣಕ್ಕೆ ಸಿದ್ಧರಾಗಿದ್ದವರನ್ನು ತಡೆಯಬಾರದೆಂದು ಭಾವಿಸಿ, ಅವನಿಗೆ ಒಳ್ಳೆಯ ಮನಸ್ಸಿನಿಂದ ಹೀಗೆ ಶುಭವನ್ನು ಕೋರುತ್ತಾಳೆ: "ನಿನ್ನ ಧರ್ಮ ನಿನ್ನನ್ನು ಕಾಪಾಡಲಿ, ಚರಾಚರರೂಪವಾದ ಸೃಷ್ಟಿ ನಿನಗೆ ಮಂಗಳವನ್ನು ಉಂಟುಮಾಡಲಿ, ಅರಣ್ಯವಾಸದಲ್ಲಿ ಯಾವುದೇ ರೀತಿಯ ತೊಂದರೆ ಉಂಟಾಗದಿರಲಿ" ಎಂದು ಹಾರೈಸುತ್ತಾಳೆ; ರಾಮನ ಕ್ಷೇಮಕ್ಕಾಗಿ ಅನೇಕ ಯಾಗಯಜ್ಞಗಳನ್ನೂ ಮಾಡಿಸುತ್ತಾಳೆ.

ರಾಮನು ಸೀತೆಯ ಬಳಿ ಬಂದು, "ನಾನು ಕಾಡಿನಿಂದ ಹಿಂದಿರುಗುವವರೆಗೂ ಗುರುಹಿರಿಯರ ಶುಶ್ರೂಷೆ ಮಾಡುತ್ತಾ ಇರು. ಭರತನಿಗೆ ಕನಸಿನಲ್ಲೂ ಕೆಟ್ಟದ್ದೆಣಿಸಬೇಡ. ಅವನು ನನಗೆ ಪರಮಪ್ರಿಯ" ಎಂದು ಹೇಳುತ್ತಾನೆ. ಅದಕ್ಕೆ ಸೀತೆಯು, "ಧರ್ಮಪತ್ನಿಯಾದ ನಾನೂ ನಿನ್ನೊಡನೆ ಕಾಡಿಗೆ ಬರುವುದೇ ಧರ್ಮ. ನಿಮ್ಮ ದಾರಿಯಲ್ಲಿ ಅಡ್ಡವಾಗುವ ಮುಳ್ಳುಕಲ್ಲುಗಳನ್ನು ಎತ್ತಿಹಾಕುತ್ತಾ, ನಾನು ಕಾಡಿನಲ್ಲಿ ಮುಂದೆ ಸಾಗುತ್ತೇನೆ. ನೀನು ಜೊತೆಯಲ್ಲಿ ಇರುವಾಗ ಕಾಡೇ ನನಗೆ ತವರುಮನೆ" ಎನ್ನುತ್ತಾಳೆ. ಸೀತೆಯು ಪತ್ನಿಯ ಕರ್ತವ್ಯಗಳನ್ನು ತಿಳಿಸುತ್ತಾ, **"ಭಕ್ತಾಂ ಪತಿವ್ರತಾಂ ದೀನಾಂ ಮಾಂ ಸಮಾಂ ಸುಖದುಃಖಯೋಃ । ನೇತುಮರ್ಹಸಿ...** – ನೀನು ನನ್ನನ್ನು ಅಲಕ್ಷಿಸಿ ನಿನ್ನೊಡನೆ ಕರೆದೊಯ್ಯದಿದ್ದರೆ ನನಗೆ ಈ ಬಾಳೇ ಬೇಡ. ನಿನ್ನ ಧರ್ಮದಲ್ಲಿ ಸಹಭಾಗಿಯಾಗುವುದೇ ನನ್ನ ಕರ್ತವ್ಯ" ಎಂದು ನಾನಾ ರೀತಿಯಲ್ಲಿ ತಿಳಿಸುತ್ತಾಳೆ. ಲಕ್ಷ್ಮಣನು, "ನೀನೆಲ್ಲೋ ನಾನೂ ಅಲ್ಲೇ, ಸುಖದಲ್ಲಿ ಪಾಲುದಾರನಾದ ನಾನು ಕಷ್ಟದಲ್ಲಿ ನಿನಗೆ ಬೇಡವಾದೆನೇ? ನಿಮಗೆ ನಾನು ದಾರಿ ಮಾಡಿಕೊಡುತ್ತೇನೆ, ಮನೆ ಕಟ್ಟಿಕೊಡುತ್ತೇನೆ, ನೀವು ಮಲಗಿದ್ದಾಗ ಎಚ್ಚರದಿಂದ ಕಾವಲು ಕಾಯುತ್ತೇನೆ" ಎಂದು ಹಿರಿಯಣ್ಣನ ಸತ್ಯಧರ್ಮನಿಷ್ಠೆಯಲ್ಲಿ ಪಾಲುದಾರನಾಗುತ್ತಾನೆ. ಮಗನನ್ನು ಅಗಲುವ ದುಃಖದಿಂದ ಕೌಸಲ್ಯೆ ಗೋಳಿಡುವಾಗ ಸುಮಿತ್ರೆಯು, "ಅಕ್ಕಾ! ತಂದೆಯ ಸತ್ಯಪ್ರತಿಜ್ಞೆಯನ್ನು ನೆರವೇರಿಸಲು ಹೊರಟಿರುವ ಮಗನಿಗಾಗಿ ನೀನು ಹೆಮ್ಮೆಪಡಬೇಕು" ಎಂದು ಸಮಾಧಾನ ಹೇಳುತ್ತಾಳೆ. "ಕಾಡಿನಲ್ಲಿ ರಾಮನು ಸುಖವಾಗಿ ಕಾಲ ಕಳೆದು, ವ್ರತವು ಮುಗಿದಮೇಲೆ ಆನಂದದಿಂದ ಅಯೋಧ್ಯೆಗೆ ಹಿಂದಿರುಗುತ್ತಾನೆ" ಎಂದು ಸುಮಿತ್ರೆಯು ರಾಮನ ನಿರ್ಧಾರಕ್ಕೆ ಪೂರಕಳಾಗಿ ನಿಲ್ಲುತ್ತಾಳೆ; "ಸೂರ್ಯಚಂದ್ರಾದಿ ಎಲ್ಲಾ ದೇವತೆಗಳೂ ವ್ರತದೀಕ್ಷಿತರಿಗೆ ಮಂಗಳವನ್ನುಂಟುಮಾಡಲಿ" ಎಂದು ತುಂಬು ಹೃದಯದಿಂದ ಹಾರೈಸುತ್ತಾಳೆ.

ರಾಮನು ದಾರಿಯಲ್ಲಿ ಶೃಂಗಬೇರಪುರವನ್ನು ತಲುಪಿ, ಅಲ್ಲಿನ ಒಡೆಯ ಗುಹನನ್ನು ಸಂಧಿಸುತ್ತಾನೆ. ಗುಹನು ರಾಮನಿಗೆ ತನ್ನ ರಾಜ್ಯವನ್ನೇ ಅರ್ಪಿಸುತ್ತಾನೆ. "ನಾವೆಲ್ಲಾ ನಿನ್ನ ಸೇವಕರು, ನಮ್ಮನ್ನು ರಕ್ಷಿಸುತ್ತಾ ನೀನು ಇಲ್ಲೇ ಇರು" ಎಂದು ಬೇಡುತ್ತಾನೆ. ಗುಹನ ಸ್ನೇಹ, ವಾತ್ಸಲ್ಯ ಎಷ್ಟು ಉನ್ನತವಾದುದು! ರಾಮನ ಸತ್ಯಪ್ರತಿಜ್ಞೆಯ ರಕ್ಷಣೆಯಲ್ಲಿ ತನ್ನದೂ ಪಾತ್ರವಿದೆಯೆಂದು ಭಾವಿಸುತ್ತಾನೆ. ರಾಮನು ಗುಹನ ಸ್ನೇಹವನ್ನು ಹೃತ್ಪೂರ್ವಕವಾಗಿ ಕೊಂಡಾಡುತ್ತಾನೆ. ಕಷ್ಟಸುಖಗಳಲ್ಲಿ ಭಾಗಿಯಾಗುವ, ಸಮಸ್ತವನ್ನೂ ಸ್ನೇಹಿತನಿಗಾಗಿ ತ್ಯಾಗಮಾಡುವ ಗುಹನನ್ನು ಕಂಡು, ರಾಮನ ಹೃದಯ ತುಂಬಿಹೋಗುತ್ತದೆ. ತಂದೆಯ ಆಜ್ಞೆಯನ್ನು ಪರಿಪಾಲಿಸುವ ಸಲುವಾಗಿ ಗುಹನ ಕೋರಿಕೆಯನ್ನು ಅಂಗೀಕರಿಸುವುದಿಲ್ಲ. ಆದರೆ ಗುಹನ ಹೃದಯತುಂಬಿದ ಸತ್ಕಾರವನ್ನು ಸ್ವೀಕರಿಸುತ್ತಾನೆ. ಅರಣ್ಯಜೀವನಕ್ಕೆ ಅನುಗುಣವಾಗಿ ಹಣ್ಣುಹಂಪಲನ್ನು ಆಹಾರವಾಗಿ ಸೇವಿಸುತ್ತಾನೆ. ರಾತ್ರಿ ಸೀತಾರಾಮರು ವಿಶ್ರಮಿಸುವಾಗ ಗುಹನು ಕಾವಲು ಕುಳಿತುಕೊಳ್ಳುತ್ತಾನೆ. ಲಕ್ಷ್ಮಣನನ್ನೂ ವಿಶ್ರಮಿಸಲು ಹೇಳುತ್ತಾನೆ. ಅಣ್ಣ–ಅತ್ತಿಗೆ ನೆಲದ ಮೇಲೆ ಮಲಗಿರುವುದನ್ನು ನೋಡಿ, ಲಕ್ಷ್ಮಣ ಸಂಕಟಪಡುತ್ತಾನೆ. ಲಕ್ಷ್ಮಣ–ಗುಹರು ಜೊತೆಯಾಗಿ ಎಚ್ಚರವಾಗಿದ್ದು, ರಾಮನ ವಿಷಯವನ್ನೇ ಮಾತನಾಡುತ್ತಾ, ಕಾಲಕಳೆಯುತ್ತಾರೆ. ಮರುದಿನ ಗುಹನು ರಾಮನಿಗೆ ಜಟೆಯನ್ನು ಕಟ್ಟಲು ನೆರವಾಗುತ್ತಾನೆ. ಗಂಗಾನದಿಯನ್ನು ದಾಟಲು ದೋಣಿಯನ್ನು ಸಿದ್ಧಪಡಿಸಿ, ಕಣ್ಣಳತೆ ಮೀರುವವರೆಗೆ ರಾಮನನ್ನೇ ನೋಡುತ್ತಾ ನಿಲ್ಲುತ್ತಾನೆ. ಇಂತಹ ಗುಹನ ಪ್ರೀತಿಗೆ ಸಾಟಿ ಯಾವುದಿದೆ?!

ಕಾಡಿನಲ್ಲಿ ಸಂಚರಿಸುತ್ತಾ ಇರುವಾಗ, ಒಮ್ಮೆ ರಾಮನಿಗೆ ತಂದೆತಾಯಿ, ಅಯೋಧ್ಯೆ ಎಲ್ಲಾ ನೆನಪಾಗುತ್ತದೆ. ತನ್ನ ತಂದೆತಾಯಿ ಏನೇನು ಕಷ್ಟಪಡುತ್ತಿರುವರೋ ಎಂದು ಚಿಂತಿಸಿ, ಲಕ್ಷ್ಮಣನನ್ನು ಅಯೋಧ್ಯೆಗೆ ಹಿಂದಿರುಗಿ ಹೋಗೆಂದು ಬೇಡುತ್ತಾನೆ. ಲಕ್ಷ್ಮಣನು, "ನೀನಿಲ್ಲದೇ ನನಗೆ ಸ್ವರ್ಗವೂ ರುಚಿಸುವುದಿಲ್ಲ, ನಾನು ನಿನ್ನನ್ನು ಬಿಟ್ಟುಹೋಗಲಾರೆ" ಎನ್ನುತ್ತಾನೆ.

ಅಯೋಧ್ಯೆಗೆ ಬಂದ ಭರತನು, ನಡೆದ ಸಮಾಚಾರವನ್ನು ತಿಳಿದು, ಅಣ್ಣನನ್ನು ಅಯೋಧ್ಯೆಗೆ ಕರೆದುಕೊಂಡು

ಬರುವ ನಿರ್ಣಯವನ್ನು ಮಾಡುತ್ತಾನೆ. ರಾಮನನ್ನು ನೋಡುವ ಹಂಬಲದಿಂದ ನಾಮುಂದು ತಾಮುಂದು ಎಂದು ಪ್ರಜೆಗಳೆಲ್ಲರೂ ಭರತನನ್ನು ಹಿಂಬಾಲಿಸುತ್ತಾರೆ. ಭರತ ಕಾಡಿನಲ್ಲಿ ಅಣ್ಣನನ್ನು ಕಂಡಕೂಡಲೇ ಮಗುವಿನಂತೆ ಓಡಿಹೋಗಿ, ಅವನ ಪಾದದ ಮೇಲೆ ಬಿದ್ದು ಕಣ್ಣೀರಿಡುತ್ತಾನೆ: "ನೀನಿಲ್ಲದ ರಾಜ್ಯ ನನಗೆ ಬೇಡ, ನೀನು ಅಯೋಧ್ಯೆಗೆ ಹಿಂದಿರುಗಿ ಬಾ" ಎಂದು ಹಲವು ರೀತಿಯಲ್ಲಿ ಒತ್ತಾಯಿಸುತ್ತಾನೆ. ಕೊನೆಯ ಅಸ್ತ್ರವಾಗಿ ಪ್ರಾಯೋಪವೇಶನದ ನಿರ್ಣಯ ಕೈಗೊಳ್ಳುತ್ತಾನೆ. "ತಂದೆಯ ಮಾತು ಇಬ್ಬರಿಗೂ ಸಮಾನವಾಗಿ ಪ್ರಮಾಣ. ಇಬ್ಬರೂ ಅದನ್ನು ನೆರವೇರಿಸಬೇಕು. ವನವಾಸದ ಅವಧಿ ಕಳೆದ ಮೇಲೆ ರಾಜ್ಯವನ್ನು ಸ್ವೀಕರಿಸುವೆ" ಎಂದು ರಾಮನು ಭರತನನ್ನು ಸಮಾಧಾನ ಮಾಡುತ್ತಾನೆ. ಭರತನು, "ಅಣ್ಣಾ, ನಾನು ರಾಜ್ಯವಾಳಲು ಸಮರ್ಥನಲ್ಲ" ಎಂದರೆ, ಅದಕ್ಕೆ ರಾಮನು, "ತಮ್ಮಾ, ನಿನ್ನಂತಹ ಸಮರ್ಥ ಇನ್ನೊಬ್ಬನಿಲ್ಲ, ತಂದೆಯ ಮಾತನ್ನು ಇಬ್ಬರೂ ನಡೆಸಬೇಕು" ಎಂದು ಭರತನಿಗೆ ಮನವರಿಕೆ ಮಾಡಿಕೊಡುತ್ತಾನೆ. ಅಲ್ಲಿದ್ದ ಜನರೆಲ್ಲಾ ಸಹೋದರರ ಈ ಪ್ರೇಮ, ಧರ್ಮಶ್ರದ್ಧೆಗಳನ್ನು ನೋಡಿ ಆಶ್ಚರ್ಯಗೊಳ್ಳುತ್ತಾರೆ. ಇಂತಹ ಸತ್ಪುತ್ರರನ್ನು ಪಡೆದ ದಶರಥನ ಪುಣ್ಯವನ್ನು ಕೊಂಡಾಡುತ್ತಾರೆ. ರಾಮನು ಭರತನಿಗೆ ಕೈಕೇಯಿಯನ್ನು ಯೋಗ್ಯ ರೀತಿಯಲ್ಲಿ ನಡೆಸಿಕೊಳ್ಳಲು ಹೇಳಿ, ಸೀತೆಯ ಮೇಲೆ ಆಣೆಯಿಟ್ಟು ಕಳುಹಿಸಿಕೊಡುತ್ತಾನೆ.

ಚಿತ್ರಕೂಟವು ಅಯೋಧ್ಯೆಗೆ ಹತ್ತಿರವಾಗಿದ್ದುದರಿಂದ ಜನರು ಪದೇ ಪದೇ ಇಲ್ಲಿಗೆ ಬರಬಹುದೆಂದು ನಿರೀಕ್ಷಿಸಿ, ರಾಮನು ಅಲ್ಲಿಂದ ಮುಂದೆ ಹೋಗುವ ನಿರ್ಣಯವನ್ನು ಕೈಗೊಳ್ಳುತ್ತಾನೆ. ದಾರಿಯಲ್ಲಿ ಅತ್ರಿಮುನಿಗಳ ಆಶ್ರಮಕ್ಕೆ ಅವರೆಲ್ಲ ಹೋಗುತ್ತಾರೆ. ಅತ್ರಿಮುನಿಗಳ ಪತ್ನಿ ಅನಸೂಯೆ ಸೀತೆಗೆ ಪಾತಿವ್ರತ್ಯ ಧರ್ಮವನ್ನು ತಿಳಿಸಿಕೊಡುತ್ತಾಳೆ. ಅವಳ ಬಳಿ ಸೀತೆ ಶ್ರೀರಾಮನಿಗೆ ತನ್ನಲ್ಲಿ, ತನಗೆ ಶ್ರೀರಾಮನಲ್ಲಿರುವ ಅಗಾಧ ಪ್ರೇಮವನ್ನು ವರ್ಣಿಸುತ್ತಾಳೆ.

ಅಲ್ಲಿಂದ ಮುಂದೆ ಹೋಗುತ್ತಿರುವಾಗ, ವಿರಾಧನೆನ್ನುವ ಅಸುರನು ರಾಮಲಕ್ಷ್ಮಣರನ್ನು ಎತ್ತಿಕೊಂಡು ಓಡಿಹೋಗುತ್ತಾನೆ. ಆಗ ಸೀತೆಯು ಕುಟುಂಬದ ಸಂರಕ್ಷಣೆಗಾಗಿ, ಅತ್ತೆಮಾವರಿಗೆ ದುಃಖ ಉಂಟಾಗಬಾರದೆಂದು ಅವರಿಬ್ಬರನ್ನೂ ಬಿಟ್ಟು, ತನ್ನನ್ನೇ ಆಹಾರವಾಗಿ ಸ್ವೀಕರಿಸು ಎಂದು ವಿರಾಧನನ್ನು ಬೇಡುತ್ತಾಳೆ. ಅಂತಿಮವಾಗಿ, ರಾಮನು ವಿರಾಧನ ವಧೆಯನ್ನು ಮಾಡಿ, ಅವರೆಲ್ಲರೂ ಪಂಚವಟಿಗೆ ಬಂದು ಸೇರುತ್ತಾರೆ. ಅಲ್ಲಿ ಸುತೀಕ್ಷ್ಣ ಎಂಬ ಋಷಿಯು ರಾಕ್ಷಸರಿಂದ ತಮ್ಮನ್ನು ಕಾಪಾಡಬೇಕೆಂದು ಕೇಳಿಕೊಳ್ಳುತ್ತಾನೆ. ರಾಮನು ಅವನಿಗೆ ಅಭಯವನ್ನು ಕೊಡುತ್ತಾನೆ. ಆಗ ಸೀತೆಯು, "ನಮಗೆ ಏನೂ ತೊಂದರೆ ಮಾಡದವರನ್ನು ಶಿಕ್ಷಿಸುವುದು ಧರ್ಮವಲ್ಲ, ತಪಸ್ವಿಯ ವೇಷವನ್ನು ಧರಿಸಿ, ಆಯುಧ ಹಿಡಿದಿರುವುದೂ ನ್ಯಾಯವಲ್ಲ, ಅದರ ಬದಲಿಗೆ ಅಯೋಧ್ಯೆಗೆ ಹೋಗಿ ಕ್ಷತ್ರಿಯಧರ್ಮ ಪಾಲಿಸುವುದೇ ಉಚಿತ" ಎಂದು ರಾಮನಿಗೆ ತಿಳಿಸುತ್ತಾಳೆ. "ನಿನ್ನ ಹಿತವನ್ನೇ ಸದಾ ಬಯಸುತ್ತಿರುವುದರಿಂದ ಈ ರೀತಿ ಮಾತನಾಡಿದೆ, ತಪ್ಪಿದ್ದರೆ ಕ್ಷಮಿಸಬೇಕು" ಎಂದು ವಿನಯದಿಂದ ನಿವೇದಿಸುತ್ತಾಳೆ. ಆಗ ರಾಮನು, "ನೀನು ಕುಲಕ್ಕೆ ಉಚಿತವಾದ ಮಾತುಗಳನ್ನೇ ಆಡಿರುವೆ. ನಾನು ತಪ್ಪು ಮಾಡದೇ ಇರಬೇಕೆಂಬ ತವಕದಿಂದ ಮಾತನಾಡಿದ್ದೀಯೆ. ನಿನಗೆ ನನ್ನಲ್ಲಿರುವ ಪ್ರೀತಿ, ನಾನು ಯಾವ ಪಾಪವನ್ನೂ ಮಾಡಬಾರದೆಂದು ಬಯಸುತ್ತಿದೆ. ನನಗೆ ಯಾವ ಕೇಡೂ ಆಗಬಾರದೆಂಬುದು ನಿನ್ನ ಬಯಕೆ. ಇದರಲ್ಲಿ ತಪ್ಪೇನೂ ಇಲ್ಲ. ಆದರೆ ಸಂಕಟದಲ್ಲಿರುವವರನ್ನು ಕಾಪಾಡಲಿಕ್ಕಾಗಿ ಕ್ಷತ್ರಿಯನು ಆಯುಧವನ್ನು ಹಿಡಿಯುತ್ತಾನೆ. ಪ್ರಾಣಕ್ಕಿಂತ ಮಿಗಿಲು ನೀನು; ಜೊತೆಗೆ ಸಹಧರ್ಮಿಣಿ, ನೀನು ಹೇಳಿದ್ದು ನನ್ನ ಹಿತಕ್ಕೆ ತಾನೆ. ಆದರೆ ಋಷಿಗೆ ಅಭಯಕೊಟ್ಟು, ಈಗ ಮಾಡುವುದಿಲ್ಲ ಎಂದು ಹೇಗೆ ಹೇಳಲಿ?" ಎಂದು ಉತ್ತರಿಸುತ್ತಾನೆ.

ಮುಂದೆ ಸಾಗುತ್ತಾ ದಾರಿಯಲ್ಲಿ ಅವರು ಜಟಾಯು ಎನ್ನುವ ಬಲಿಷ್ಠವಾದ ಪಕ್ಷಿಯನ್ನು ಭೇಟಿಯಾಗುತ್ತಾರೆ. ಜಟಾಯು ತನ್ನ ಪರಿಚಯವನ್ನು ಮಾಡಿಕೊಳ್ಳುತ್ತಾ, "ನಾನು ಅರುಣನ ಮಗನು. ಮಹಾಪರಾಕ್ರಮಿಯಾದ ಸಂಪಾತಿ ನನ್ನ ತಮ್ಮ. ನಾನು ದಶರಥನ ಪ್ರಿಯ ಸ್ನೇಹಿತ. ಈ ಕಾಡು ರಾಕ್ಷಸರಿಂದ ತುಂಬಿಹೋಗಿದೆ. ಇಲ್ಲಿ ನಾನು ನಿಮಗೆ ಸಹಾಯಕನಾಗಿ ಇರುತ್ತೇನೆ. ನೀವು ಕಾಡಿನಲ್ಲಿ ಸಂಚರಿಸುವಾಗ, ಸೀತೆಯನ್ನು ಕಾಪಾಡುವ ಭಾರ ನನ್ನದು" ಎಂದು ಹೇಳಿ, ರಾಮನ ಸತ್ಯಪ್ರತಿಜ್ಞೆಯಲ್ಲಿ ಪಾಲುದಾರನಾಗುತ್ತಾನೆ. ರಾಮಲಕ್ಷ್ಮಣರಿಗೆ ಜಟಾಯುವಿನಂತಹ ಸ್ನೇಹಿತ ದೊರೆತುದುದು ತುಂಬಾ ಸಂತೋಷವಾಗುತ್ತದೆ.

ಆ ಕಾಡಿನಲ್ಲಿ ನೆಲೆಸುವುದು ಎಂದು ನಿರ್ಣಯವಾದ ಮೇಲೆ, ಲಕ್ಷ್ಮಣನು ಅಲ್ಲಿ ಒಂದು ಸುಂದರವಾದ ಕುಟೀರವನ್ನು ನಿರ್ಮಾಣ ಮಾಡುತ್ತಾನೆ. ಆ ಕುಟೀರವನ್ನು ನೋಡಿ, ರಾಮನಿಗೆ ತುಂಬಾ ಸಂತೋಷವಾಗಿ ಲಕ್ಷ್ಮಣನನ್ನು ಬಿಗಿದಪ್ಪಿಕೊಳ್ಳುತ್ತಾನೆ.